**ಓ ಎಸ್ ನಂ. 101/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 24.10.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಎ.ಜಿ.ಪಿ ವಕೀಲರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ ಸರ್ವೆ ನಂ. 79 ರಲ್ಲಿ 4 ವರೆ ಎಕರೆ ಜಮೀನು ಮಂಜೂರು ಆಗಿದೆ. ಆ ಜಮೀನಿನ ಪೂರ್ವಕ್ಕೆಃ ಸ್ವಾಮೀಗೌಡರ ಜಮೀನು, ಪಶ್ಚಿಮಕ್ಕೆಃ ಸರ್ಕಾರಿ ಗೋಮಾಳ, ದಕ್ಷಿಣಕ್ಕೆಃ ಸರ್ಕಾರಿ ಗೋಮಾಳ ಮತ್ತು ಉತ್ತರಕ್ಕೆಃ ರಸ್ತೆ ಇದೆ. ನನಗೆ ಜಮೀನು ಮಂಜೂರು ಮಾಡಿದಾಗ ನಕ್ಷೆಯನ್ನು ನೀಡಿದ್ದಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈ ದಾವೆ ಹೂಡಿದ ಸಮಯದಲ್ಲಿ ನನ್ನ ಹೆಸರಿನಲ್ಲಿ ಆರ್ ಟಿ ಸಿ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಗಂಡನ ಹೆಸರಿನಲ್ಲಿಯೂ ಸಹ ಜಮೀನು ಇದೆ. ಅದರ ಸರ್ವೆ ನಂಬರು ಗೊತ್ತಿಲ್ಲ. ಅದರ ವಿಸ್ತೀರ್ಣ 1 ವರೆ ಎಕರೆ ಇರಬಹುದು. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನನ್ನ ಗಂಡನಿಗೆ ಮೊದಲೇ ಜಮೀನು ಇರುವ ಕಾರಣ ನನಗೆ ಯಾವುದೇ ಜಮೀನನ್ನು ಮಂಜೂರು ಮಾಡದೆ ಇದ್ದರೂ ಸಹ ನಾನು ಕಂದಾಯ ಅಧಿಕಾರಿಗಳೊಂದಿಗೆ ಷರೀಕ್ಕಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಂಜೂರು ಆಗಿದೆ ಎಂದು ಹೇಳುತ್ತಿರುವ ದಾವಾ ಆಸ್ತಿಯು ಅರಣ್ಯ ಇಲಾಖೆಗೆ ಸೇರಿದ್ದು ಅದರಲ್ಲಿ ಅವರು 1962 ರಿಂದಲೂ ಗಿಡ ಮರಗಳನ್ನು ಬೆಳೆಸಿಕೊಂಡು ಬಂದಿದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಆ ಜಮೀನನ್ನು ಪಡೆದುಕೊಳ್ಳಬೇಕು ಎಂದು ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಸಹ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರದೆ ಅರಣ್ಯ ಇಲಾಖೆಯವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**